ದಿನಾಂಕಃ 27-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u> ಪ್ರತಿವಾದಿ 6 ಪರ ವಕೀಲರಿಂದ**

1) ನಾನು ಪಿಯುಸಿ ವ್ಯಾಸಂಗ ಮಾಡಿರುತ್ತೇನೆ. ನಾನು ಪ್ರತಿವಾದಿ 1 ರಿಂದ 5 ರವರ ವಿರುದ್ಧ ಈ ದಾವೆಯನ್ನು ಸಲ್ಲಿರುತ್ತೇನೆ. ನನ್ನ ತಂದೆಯ ಹೆಸರು ಶಿವಣ್ಣ @ ಶಿವಣ್ಣೆಗೌಡ ಆಗಿರುತ್ತದೆ. ಕುಪ್ಪೆ ಮತ್ತ ಅಂಕನಹಳ್ಳಿ ಒಂದೇ ಹೋಬಳಿಯ ವ್ಯಾಪ್ತಿಯಲ್ಲಿ ಎಂದರೆ ಸರಿ. ಕುಪ್ಪೆ ಅಂಕನಹಳ್ಳಿ ಮತ್ತು ಸೋಮನಹಳ್ಳಿ ಆಸ್ತಿಗಳು ಅಕ್ಕಪಕ್ಕದಲ್ಲಿ ಬರುತ್ತವೆ ಎಂದರೆ ಸರಿ. ಪ್ರತಿವಾದಿ 6 ರವರು ಅಂಕನಹಳ್ಳಿ ಗ್ರಾಮದವರು. ನಮ್ಮ ಗ್ರಾಮ ಮತ್ತು ಪ್ರತಿವಾದಿ ಗ್ರಾಮ ಸುಮಾರು ಅರ್ಧ ಕೀಲೋ ಮೀಟರ್ ದೂರದ ಅಂತರ ಇರುತ್ತದೆ.

2) ಪ್ರತಿವಾದಿ 6 ರವರು ತಮ್ಮ ಗ್ರಾಮದಲ್ಲಿ ದಿನಸಿ ಅಂಗಡಿ ವ್ಯಾಪಾರ ಮಾಡುತ್ತಾರೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. 6 ನೇ ಪ್ರತಿವಾದಿ ಆರ್ಥಿಕವಾಗಿ ಪ್ರಭಲರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕುಪ್ಪೆ ಅಂಕನಹಳ್ಳಿ ಮತ್ತು ಸೋಮನಹಳ್ಳಿ ಗ್ರಾಮ ಆಸ್ತಿಗಳು ಪಿರಿಯಾಪಟ್ಟಣ ತಾಲ್ಲೂಕಿಗೆ ಹೊಂದಿಕೊಂಡಿರುತ್ತವೆ ಎಂದರೆ ನನಗೆ ಗೊತ್ತಿಲ್ಲ.

3) ನನ್ನ ತಂದೆ ಮಾಯಗೌಡನ ಹಳ್ಳಿ ಗ್ರಾಮದಲ್ಲಿ ಆಸ್ತಿಯನ್ನು ಖರೀದಿ ಮಾಡಿರುತ್ತಾರೆ. ನನ್ನ ತಂದೆ ದಾವಾ ಆಸ್ತಿಯನ್ನು ಪ್ರತಿವಾದಿ 5 ರವರಿಂದ ಖರೀದಿ ಮಾಡಿರುತ್ತಾರೆ. ಪಿರಿಯಾಪಟ್ಟಣ ತಾಲ್ಲೂಕಿನ ಬ್ಯಾಡರಪಿಳಗೊಳಿ ಗ್ರಾಮ ನಮ್ಮ ಗ್ರಾಮದಿಂದ ಎಷ್ಟು ದೂರ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಖರೀದಿ ಮಾಡಿದಾಗ ನಾನು ನನ್ನ ತಂದೆ ಒಟ್ಟಿಗೆ ಇದ್ದೇವು. ಪ್ರತಿವಾದಿ 1 ರಿಂದ 4 ರವರು ಹಾಗೂ ಕಾಳಮ್ಮ ರವರು ನನಗೆ ದಾಖಲಾತಿಯ ಪರಿಶೀಲನೆಯ ನಂತರ ಗೊತ್ತಾಗಿರುತ್ತಾರೆ. ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೇನೆ.

4) ಅಸಲು ದಾವೆ ಸಂಖ್ಯೆ 209/2011 ರ ದಾವೆಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ಕಾನೂನು ಬಾಹಿರವಾಗಿ ಕ್ರಯದ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 209/2011 ದಾವೆಯ ಬಗ್ಗೆ ಪ್ರತಿವಾದಿ 5 ರವರು ನನಗೆ ತಿಳಿಸಿರುವುದಿಲ್ಲ. ನಾನು ಕ್ರಯದ ಕರಾರು ಪತ್ರ ಮಾಡಿಕೊಂಡಾಗ 6 ನೇ ಪ್ರತಿವಾದಿ ತಿಳುವಳಿಕೆ ಪತ್ರ ಕಳುಹಿಸಿದ್ದರು ಎಂದರೆ ಸರಿಯಲ್ಲ. ಸದರಿ ತಿಳುವಳಿಕೆ ಪತ್ರ ಜಾರಿಯಾದ ನಂತರ ನನ್ನ ತಂದೆ ಹೆಸರಿಗೆ ಕ್ರಯ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿ 5 ನೇ ಪ್ರತಿವಾದಿಗೂ ಸಹ ಆಸ್ತಿಯನ್ನು ಮಾರಾಟ ಮಾಡಬಾರದೆಂದು ತಿಳುವಳಿಕೆ ಪತ್ರ ಕಳುಹಿಸಿದ್ದರು ಎಂದರೆ ಸರಿಯಲ್ಲ.

5) ಅಸಲು ದಾವೆ ಸಂಖ್ಯೆ 209/2011 ರ ದಾವೆಯ ಬಗ್ಗೆ 2023 ನೇ ಸಾಲಿನಲ್ಲಿ ನನಗೆ ತಿಳಿದಿರುತ್ತದೆ. ಆರ್ ಎ 45/2017 ರ ಮೇಲ್ಮನವಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರ್ ಎ 45/2017 ರ ಮೇಲ್ಮನವಿಯಲ್ಲಿ ಪ್ರತಿವಾದಿ 1 ರಿಂದ 4 ರವರು ಪಕ್ಷಗಾರರಾಗಿರುತ್ತಾರೆ ಎಂದರೆ ಸಾಕ್ಷಿಯು ದಿನಾಂಕ 23.01.2023 ರಲ್ಲಿ ನನಗೆ ತಿಳಿದಿರುತ್ತದೆ. 5 ನೇ ಪ್ರತಿವಾದಿ ಯಾವ ದಿನಾಂಕದಂದು ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ.

6) ಆರ್ ಎ 45/2017 ಮೇಲ್ಮನವಿಯಲ್ಲಿ ಪ್ರತಿವಾದಿ 1 ರಿಂದ 4 ರವರಿಗೆ ನೋಟಿಸ್ ಜಾರಿ ಆದನಂತರ ಪ್ರತಿವಾದಿ 5 ರವರು ದಾವಾ ಸ್ವತ್ತನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತನು ನಾವು ಖರೀದಿ ಮಾಡುವ ಪೂರ್ವದಲ್ಲಿ ಪ್ರತಿವಾದಿ 5 ರವರು ಸಹ ಆರ್ ಎ 45/2017 ರಲ್ಲಿ ನೋಟಿಸ ಜಾರಿ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯವನ್ನು ನನಗೆ 5 ಪ್ರತಿವಾದಿ ತಿಳಿಸಿರುವುದಿಲ್ಲ.

7) ದಿನಾಂಕ 15.06.2023 ರ ಹಿಂದೆ ನಡೆದ ದಾವೆಗಳ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಿನಾಂಕ 15.06.2023 ರ ಹಿಂದೆ ನಾನು ಆರ್ ಎ 45/2017 ರ ತೀರ್ಪಿನ ವಿರುದ್ಧ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 2 ನೇ ಮೇಲ್ಮನವಿಯನ್ನು ಸಲ್ಲಿಸಿದ್ದೇವು ಎಂದರೆ ಸರಿಯಲ್ಲ. ನಾನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಆರ್ ಎಸ್ ಎ ಸಂಖ್ಯೆ 579/2023 2 ನೇ ಮೇಲ್ಮನವಿಯನ್ನು ಸಲ್ಲಿಸಿದ್ದೇವು ಎಂದರೆ ಸರಿ. ಸದರಿ 2 ನೇ ಮೇಲ್ಮನವಿಯನ್ನು ಎದುರುದಾರರಿಗೆ ನೋಟಿಸ ಜಾರಿ ಆಗುವ ಪೂರ್ವದಲ್ಲಿ ವಾಪಸ್ಸು ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಆರ್ ಎಸ್ ಎ ಸಂಖ್ಯೆ579/2023 2 ನೇ ಮೇಲ್ಮನವಿಯ ಬಗ್ಗೆ ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ